ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 680/2021

ಸಿ ಡಬ್ಲ್ಯೂ-3

ಪಿ ಡಬ್ಲ್ಯೂ-3

ದಿಃ 15-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ನಾಗರಾಜ ಪಾರ್ದೋಶ್ವಕರ |
| ತಂದೆಯ ಹೆಸರುಃ | ಸಾತು ಪಾರ್ದೋಶ್ವಕರ |
| ವಯಸ್ಸುಃ | 50 ವರ್ಷ |
| ಉದ್ಯೋಗಃ | ಇಲೆಕ್ಟ್ರಿಷಿಯನ್ |
| ವಿಳಾಸಃ | ಬೆಳಸೆ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-ಮತ್ತು 2 ರವರ ಪರಿಚಯ ಇರುತ್ತದೆ. ಅವರು ನಮ್ಮ ಊರಿನವರು. ಆರೋಪಿತರ ಪರಿಚಯವಿರುವುದಿಲ್ಲ. ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ಮೇರೆಗೆ ನಮ್ಮ ಪಕ್ಕದ ಮನೆಯಾದ ಕಾರಣ ನೋಡಲು ಹೋಗಿರುತ್ತೇವೆ. ನಾವು ನೋಡಲು ಹೋದಾಗ ಪೊಲೀಸರು ಪಂಚನಾಮೆಗೆ ನಮ್ಮ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ನಿಪಿ-2 ರ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು. ನಿಪಿ-15 ರ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ನಿಪಿ-15ಬಿ ಎಂದು ಗುರುತಿಸಲಾಯಿತು. ನಂತರ ಪೊಟೋಗಳನ್ನು ತೆಗೆದಿರುತ್ತಾರೆ. ನಿಪಿ-3 ರಿಂದ 5 ಪೊಟೋಗಳನ್ನು ಸಾಕ್ಷಿಯು ಗುರುತಿಸುತ್ತಾರೆ. ಪಂಚನಾಮೆಯನ್ನು ಬರೆಯಲು

ಚಾಸಾ-1 ರವರು ಮಾಹಿತಿ ಕೊಟ್ಟಿರುತ್ತಾರೆ. ಅಂದಾಜು ಮೂರುವರೆ- ನಾಲ್ಕು ವರ್ಷಗಳ ಹಿಂದೆ ಸಹಿಯನ್ನು ಹಾಕಿರುತ್ತೇನೆ. ನಾನು ಸಂಜೆ 4.30 ಗಂಟೆಗೆ ಹೋಗಿದ್ದು, ಪಂಚನಾಮೆಯನ್ನು ಎಷ್ಟು ಗಂಟೆಗೆ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ನೀವು ದಿಃ08-10-2020 ರಂದು ಪಂಚನಾಮೆಗೆ ಸಹಿಯನ್ನು ಮಾಡಿರುತ್ತೀರಿ ಎಂದರೆ ನೆನಪಿರುವುದಿಲ್ಲ. ಅದೇ ದಿನ ಕಚ್ಚಾ ನಕಾಶೆಯನ್ನು ಬಿಡಿಸಿ ತಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನೆನಪಿರುವುದಿಲ್ಲ. ಪೊಟೋಗಳನ್ನೂ ಸಹ ಪಂಚನಾಮೆಗೆ ಸಾಕ್ಷಿಯಾಗಿ ಅವರ ಮನೆಯ ಮುಂದೆ ನಿಲ್ಲಿಸಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಸಾಯಂಕಾಲ 7.15 ರಿಂದ ರಾತ್ರಿ 9.15 ಗಂಟೆಯವರೆಗೆ ಜರುಗಿಸಲಾಯಿತು ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದಿ ಎಲ್ಲ ವಿಷಯಗಳು ನಿಮಗೆ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಿಮದೇ ತಾಲುಾಕಿನವರು ಆಗಿದ್ದರಿಂದ ಹಾಗೂ ಅವರು ನಿಮಗೆ ಪರಿಚಯಸ್ತರು ಆಗಿರುವ ಕಾರಣ ಅವರಿಗೆ ಸಹಾಯ ಮಾಡಲೆಂದು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿ.ಎಸ್.ಎನ್. ಇವರಿಂದಃ

3. ಪೊಲೀಸರು ನಿಮಗೇನಾದರು ನೋಟೀಸನ್ನು ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಮನೆಯ ನಂಬರ ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರ ಮನೆ ಜಾಗದ ಸರ್ವೆ ನಂಬರ ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಸಹಿ ಮಾಡಿದ ಜಾಗದ ಚೆಕ್ಕಂದಿ ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಸಹಿ ಪಡೆದುಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸಹಿ ಹಾಕಿದ ದಾಖಲೆಯ ಮೇಲೆ ಏನು ಬರೆಯಲಾಗಿದೆ ಎಂದು ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಯಾವುದರ ಮುಖಾಂತರ ಪೊಟೋ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೊಟೋ ತೆಗೆದ ಜಾಗದ ಚೆಕ್ಕಂದಿ ಹೇಳಲು ಬರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.